FRIDAY, 12 MAY, 2016

ಪ್ರಜಾವಾಣಿ

ಕರ್ನಾಟಕದ ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

# ‘ವಿಷನ್ ಗ್ರೂಪ್ ’ ಪ್ರಸ್ತುತತೆ ಏನು?

ಪೂರ್ಣಿಮಾ ಹಟ್ಟಿ

Thu, 05/12/2016 - 01:00

ಬೆಂಗಳೂರು ಮಹಾನಗರದ ಮೂಲ ಸೌಕರ್ಯಗಳು ಮತ್ತು ಯೋಜನಾಬದ್ಧ ಬೆಳವಣಿಗೆಗೆ ನೆರವಾಗಲು ರಾಜ್ಯ ಸರ್ಕಾರವು ‘ಬೆಂಗಳೂರು ನೀಲನಕ್ಷೆ ಕ್ರಿಯಾ ತಂಡ’ (ವಿಷನ್ ಗ್ರೂಪ್) ರಚಿಸಿದೆ.

ಮುಖ್ಯಮಂತ್ರಿ ನೇತೃತ್ವದಲ್ಲಿನ ಈ ತಂಡದಲ್ಲಿ ನಗರದ ಗಣ್ಯ ನಾಗರಿಕರು, ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ಸ್ವಯಂ ಸೇವಾ ಸಂಸ್ಥೆಗಳು, ಸರ್ಕಾರದ ಪ್ರತಿನಿಧಿಗಳು ಇರಲಿದ್ದಾರೆ.

ನಗರದಲ್ಲಿನ ವಿವಿಧ ವಾರ್ಡ್‌ಗಳು ಮತ್ತು ಬಡಾವಣೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಪ್ರತಿನಿಧಿಗಳಿಗೆ ಈ ತಂಡದಲ್ಲಿ ಪ್ರಾತಿನಿಧ್ಯವೇ ಇಲ್ಲದಿರುವುದು ಅತಿದೊಡ್ಡ ಲೋಪವಾಗಿದೆ. ತಂಡ ರಚನೆಯ ಮೊದಲ ಆದೇಶ ಹೊರಬಿದ್ದಾಗ ಅದರಲ್ಲಿ ನಗರದ ಮಹಾಪೌರರಿಗೂ (ಮೇಯರ್) ಪ್ರಾತಿನಿಧ್ಯ ಕಲ್ಪಿಸಿರಲಿಲ್ಲ.

ಟೀಕೆಗಳು ವ್ಯಕ್ತವಾದ ನಂತರವೇ ಸರ್ಕಾರ ಈ ಲೋಪ ತಿದ್ದಿಕೊಂಡಿದೆ. ನಗರದ ಬದುಕನ್ನು ಇನ್ನಷ್ಟು ಸಹ್ಯಗೊಳಿಸುವುದೇ ‘ವಿಷನ್ ಗ್ರೂಪ್’ ರಚನೆಯ ಮೂಲ ಉದ್ದೇಶವಾಗಿದೆ.

ನಗರದ ಯೋಜನಾಬದ್ಧ ಬೆಳವಣಿಗೆ ಬಗ್ಗೆ ಈ ತಂಡ ಕಾಳಜಿ ವಹಿಸಲಿರುವುದರಿಂದ ಇದೊಂದು ಶ್ಲಾಘನೀಯ ನಿರ್ಧಾರವಾಗಿರುವುದರಲ್ಲಿ ಯಾವುದೇ ಸಂದೇಹವಿಲ್ಲ.ಹಾಗಿದ್ದರೆ, ಈ ತಂಡ ರಚನೆಯಲ್ಲಿ ಇರುವ ವಿವಾದ ಅಥವಾ ಆಕ್ಷೇಪವಾದರೂ ಏನು ಎನ್ನುವ ಅನುಮಾನ ಕೆಲವರನ್ನು ಕಾಡುವುದು ಸಹಜ. ಅದಕ್ಕೆ ಇಲ್ಲಿದೆ ಉತ್ತರ.

ಸ್ಥಳೀಯ ಪೌರ ಸಂಸ್ಥೆಗಳು ಸ್ವಯಂ ಆಡಳಿತದ ಪ್ರಜಾಸತ್ತಾತ್ಮಕ ಘಟಕಗಳಾಗಿ ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸಲು ಅನುಕೂಲ ಕಲ್ಪಿಸುವ ಉದ್ದೇಶದಿಂದ ಸಂವಿಧಾನದ 74ನೇ ತಿದ್ದುಪಡಿಯನ್ನು 1992ರಲ್ಲಿ ಅಂಗೀಕರಿಸಲಾಗಿದೆ. ಇದರ ಅನ್ವಯ, ಮೂರು ಹಂತದ ಆಡಳಿತ ವ್ಯವಸ್ಥೆ ಪರಿಪೂರ್ಣವಾಗಿ ಕಾರ್ಯ ನಿರ್ವಹಿಸಲು ರಾಜ್ಯ ಸರ್ಕಾರದ ಕೆಲ ಅಧಿಕಾರ, ಹೊಣೆಗಾರಿಕೆಗಳನ್ನು ಪೌರ ಸಂಸ್ಥೆಗಳಿಗೆ ವರ್ಗಾಯಿಸಲಾಗಿದೆ.

ಈ ಮೂರನೆ ಹಂತದ ಆಡಳಿತವು, ಮಹಾನಗರ ಯೋಜನಾ ಸಮಿತಿಯನ್ನೂ (ಎಂಪಿಸಿ) ಒಳಗೊಂಡಿದೆ. ಮಹಾನಗರಗಳ ವ್ಯಾಪ್ತಿಯಲ್ಲಿನ ಅಭಿವೃದ್ಧಿ ಯೋಜನೆಯ ನೀಲನಕ್ಷೆ ರೂಪಿಸುವ ಹೊಣೆಗಾರಿಕೆಯು ಈ ಸಮಿತಿಯ

ಹೆಗಲ ಮೇಲೆ ಇದೆ. ಸ್ಥಳೀಯ ಪೌರ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪ್ರತಿನಿಧಿಗಳು ಈ 'ಎಂಪಿಸಿ' ಸದಸ್ಯರಾಗಿರುತ್ತಾರೆ.

ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ 'ಎಂಪಿಸಿ' ರಚಿಸುವುದಕ್ಕೆ ಅನುವಾಗಲು, 'ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್ ಕಾಯ್ದೆ– 1976'ಕ್ಕೆ 1994ರಲ್ಲಿ ತಿದ್ದುಪಡಿ ಮಾಡಲಾಗಿದೆ. ಆದರೆ, ಈ 'ಎಂಪಿಸಿ'ಗಳು ಕಾರ್ಯಾರಂಭ ಮಾಡಲು ಅಗತ್ಯವಾದ ನಿಯಮಾವಳಿಗಳ ರಚನೆಗೆ ರಾಜ್ಯ ಸರ್ಕಾರವು ಬಹಳ ಸಮಯದವರೆಗೆ ಆಸಕ್ತಿಯನ್ನೇ ತೋರಿಸಿರಲಿಲ್ಲ. 2013ರಲ್ಲಿ ಕರ್ನಾಟಕ ಹೈಕೋರ್ಟ್ ಆದೇಶದ ಮೇರೆಗೆ ನಿಯಮಗಳನ್ನು ರೂಪಿಸಿ ಅಧಿಸೂಚನೆ ಹೊರಡಿಸಲಾಗಿದೆ.

ಈಗ ಬೆಂಗಳೂರು 'ಎಂಪಿಸಿ' ಅಸ್ತಿತ್ವದಲ್ಲಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿನ ಅಭಿವೃದ್ಧಿ ಯೋಜನೆಗಳ ನೀಲ ನಕ್ಷೆ ತಯಾರಿಸುವುದು, ಅವುಗಳನ್ನು ಕಾರ್ಯರೂಪಕ್ಕೆ ತರುವ ಹೊಣೆಗಾರಿಕೆ ಹೊಂದಿದೆ. ಅಂದರೆ ನಗರದ ಎಲ್ಲ ಮೂಲ ಸೌಕರ್ಯ ಯೋಜನೆಗಳ ಸಮಗ್ರ ಯೋಜನೆ ರೂಪಿಸುವುದು, ಕಾರ್ಯರೂಪಕ್ಕೆ ತರುವುದು 'ಎಂಪಿಸಿ'ಕರ್ತವ್ಯವಾಗಿದೆ.

ದುರದೃಷ್ಟವಶಾತ್ ಇದು ಸದ್ಯಕ್ಕೆ ಕಾರ್ಯ ನಿರ್ವಹಿಸುತ್ತಿಲ್ಲ. ಮುಖ್ಯಮಂತ್ರಿ ನೇತೃತ್ವದಲ್ಲಿ ಕಾರ್ಯ ನಿರ್ವಹಿಸಬೇಕಾದ 'ಬೆಂಗಳೂರು ಎಂಪಿಸಿ'ಯು ಇದುವರೆಗೆ ಒಂದು ಬಾರಿಯೂ ಸಭೆ ಸೇರಿಲ್ಲ ಎನ್ನುವುದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ.

ಇದಕ್ಕೆ ಕಾರಣ ತಿಳಿದುಕೊಳ್ಳಲು ಹೆಚ್ಚು ಶ್ರಮಪಡಬೇಕಾಗಿಲ್ಲ. ಬೆಂಗಳೂರಿನ ಯೋಜನಾಬದ್ಧ ಅಭಿವೃದ್ಧಿಗೆ ಸಂಬಂಧಿಸಿದಂತೆ ತನ್ನ ಅಧಿಕಾರವನ್ನು ನಗರದ ಸ್ಥಳೀಯ ಸ್ವಯಂ ಆಡಳಿತ ವ್ಯವಸ್ಥೆಗೆ ವರ್ಗಾಯಿಸಲು ಸರ್ಕಾರಕ್ಕೆ ಮನಸ್ಸು ಇಲ್ಲದಿರುವುದು ಗುಟ್ಟಿನ ಸಂಗತಿ ಏನಲ್ಲ.

ನಗರದ ಅಭಿವೃದ್ಧಿ ಅಥವಾ ಮೂಲಸೌಕರ್ಯ ಸಮಸ್ಯೆಗಳ ಬಗ್ಗೆ ಅಲ್ಪಮಟ್ಟಿಗಿನ ತಿಳಿವಳಿಕೆ ಹೊಂದಿರುವ ಅಥವಾ ಈ ಬಗ್ಗೆ ಯಾವುದೇ ಅನುಭವ ಇರದ ಗಣ್ಯ ನಾಗರಿಕರನ್ನು ಒಳಗೊಂಡ ಇನ್ನೊಂದು ತಂಡ ರಚಿಸುವುದಕ್ಕಿಂತ, ಸಂವಿಧಾನಾತ್ಮಕವಾಗಿ ಕಡ್ಡಾಯವಾಗಿರುವ 'ಎಂಪಿಸಿ'ಗೆ ಅಗತ್ಯವಾದ ಅಧಿಕಾರ ಕೊಟ್ಟು, ಅದು ಸಮರ್ಪಕವಾಗಿ ಕಾರ್ಯ ನಿರ್ವಹಿಸುವಂತೆ ಮಾಡಬೇಕಾಗಿದೆ.

ಬೆಂಗಳೂರಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ಬೆಂಗಳೂರು ಮಹಾನಗರ ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರ (ಬಿಎಂಆರ್‌ಡಿಎ) ಸೇರಿದಂತೆ ಹಲವಾರು ಯೋಜನಾ ಪ್ರಾಧಿಕಾರಗಳು ಕಾರ್ಯ ನಿರ್ವಹಿಸುತ್ತಿವೆ. ಜತೆಗೆ, 'ಎಂಪಿಸಿ'ಯೂ ಅಸ್ತಿತ್ವದಲ್ಲಿದೆ. ಈ ಎಲ್ಲ ಪ್ರಾಧಿಕಾರಗಳು ಅವುಗಳದ್ದೇ ಆದ ಪ್ರತ್ಯೇಕ ಶಾಸನಬದ್ಧ ಸ್ಥಾನಮಾನ ಹೊಂದಿವೆ. ಅವುಗಳ ಮಧ್ಯೆ ಸಮನ್ವಯದ ಕೊರತೆಯೂ ಸಾಕಷ್ಟಿದೆ. ರಾಜ್ಯ ಸರ್ಕಾರವೊಂದೇ ಈ ಪ್ರಾಧಿಕಾರಗಳ ಜತೆ ಸಂವಹನ ನಡೆಸುತ್ತಿದ್ದರೂ, ನಗರದ ಯೋಜನಾಬದ್ಧ ಅಭಿವೃದ್ಧಿಗೆ ಏಕರೂಪದ ಸಮನ್ವಯದ ಕಾರ್ಯಸೂಚಿಯೇ ಅಸ್ತಿತ್ವದಲ್ಲಿ ಇಲ್ಲ.

'ಪ್ರಾದೇಶಿಕ ಮಹಾನಗರ ಯೋಜನೆ 2035' ರೂಪಿಸುವ ಹೊಣೆಯನ್ನು 'ಬಿಡಿಎ'ಗೆ ಒಪ್ಪಿಸಿರುವುದು ಈ ಸಮಸ್ಯೆಯ ತೀವ್ರತೆಗೆ ಕನ್ನಡಿ ಹಿಡಿಯುತ್ತದೆ. ಈ ಯೋಜನೆ ಕಾರ್ಯಗತಗೊಳಿಸಲು ಈಗಾಗಲೇ

ಸಲಹೆಗಾರರನ್ನು ಅಂತಿಮಗೊಳಿಸಲಾಗಿದೆ. ಒಂದು ವೇಳೆ ರಾಜ್ಯ ಸರ್ಕಾರ ‘ಬಿಡಿಎ’ಯ ಯೋಜನೆಯನ್ನು ಅಂಗೀಕರಿಸಿದರೆ, ‘ಎಂಪಿಸಿ’ಯನ್ನು ಕಡೆಗಣಿಸಿದಂತಾಗಲಿದೆ.

ಅಗತ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿರುವ ಯೋಜನಾ ಅಭಿವೃದ್ಧಿ ಸಂಸ್ಥೆಗಳ ಸಾಲಿಗೆ ಈಗ ಅಂತಹದ್ದೇ ಉದ್ದೇಶ ಹೊಂದಿರುವ ಇನ್ನೊಂದು ತಂಡ (ವಿಷನ್ ಗ್ರೂಪ್) ಸೇರ್ಪಡೆಯಾಗಲಿದೆ. ‘ವಿಷನ್ ಗ್ರೂಪ್’ನ ಕಾರ್ಯ ನಿರ್ವಹಣೆ ಬಗ್ಗೆಯೇ ಅಸ್ಪಷ್ಟತೆ ಇರುವಾಗ, ಅದರ ಪಾತ್ರಕ್ಕೆ ಸಂಬಂಧಿಸಿದ ವಿಷಯದಿಂದ ಇನ್ನಷ್ಟು ವ್ಯಾಜ್ಯಗಳಿಗೆ ಅವಕಾಶ ಮಾಡಿಕೊಟ್ಟಂತೆ ಆಗಲಿದೆ. ಯೋಜನಾಬದ್ಧ ನಗರ ನಿರ್ಮಾಣ ಪರಿಕಲ್ಪನೆ ಬಲಿಗೊಟ್ಟು ಇಂತಹ ಸಮಿತಿ ರಚನೆ ಅಗತ್ಯವಾದರೂ ಏನಿತ್ತು?

ನಗರದ ಯೋಜನಾಬದ್ಧ ಅಭಿವೃದ್ಧಿ ವಿಷಯದಲ್ಲಿ ಪಾರದರ್ಶಕವಾಗಿ ಕಾರ್ಯ ನಿರ್ವಹಿಸುವ, ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಮತ್ತು ಉತ್ತರದಾಯಿತ್ವ ಹೊಂದಿದ ತಂಡ ರಚಿಸುವ ಅಗತ್ಯ ಇದೆ. ಬೆಂಗಳೂರಿನ ಅಭಿವೃದ್ಧಿ ಹಳ್ಳ ಹಿಡಿದಿರುವುದಕ್ಕೆ ತಡೆ ಒಡ್ಡಿ ಎಲ್ಲ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸಲು ಕೇಂದ್ರೀಕೃತ ಸಂಘಟನೆಯೊಂದರ ಅಗತ್ಯ ಇದೆ.

ಸರ್ಕಾರವು ಮಹಾನಗರ ಯೋಜನಾ ಸಮಿತಿಯನ್ನು (ಎಂಪಿಸಿ) ಸಶಕ್ತಗೊಳಿಸಿ, ಅದು ಪೂರ್ಣಪ್ರಮಾಣದಲ್ಲಿ ಕಾರ್ಯ ನಿರ್ವಹಿಸಲು ಅವಕಾಶ ಮಾಡಿಕೊಡಬೇಕಾಗಿದೆ. ಇತರ ಎಲ್ಲ ನಗರಾಭಿವೃದ್ಧಿ ಪ್ರಾಧಿಕಾರಗಳೂ ‘ಎಂಪಿಸಿ’ ಮಾರ್ಗದರ್ಶನದಲ್ಲಿ ಕಾರ್ಯ ನಿರ್ವಹಿಸುವಂತೆ ಮಾಡಿದರೆ ಮಾತ್ರ, ಬೃಹತ್ ಬೆಂಗಳೂರು ಮಹಾನಗರದ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳು ಸಮರ್ಪಕವಾಗಿ ಜಾರಿಗೆ ಬರಬಹುದೆಂದು ಆಶಿಸಬಹುದು. **(ಲೇಖಕಿ ವಕೀಲೆ)**